11.	ಆಯಕಟ್ಟ್ ರಸ್ತೆಗಳು	45.00	20.49
12.	ವಸತಿ ಸೌಲಭ್ಯ	5.00	0.98
13.	ಉಗ್ರಾಣಗಳನ್ನು ಕಟ್ಟುವುದು	2.00	–
14.	ರೈತ ಭಾಗವಹಿಸುವಿಕೆ ಮತ್ತು ನಿರ್ವಹಣೆ	1.00	–
15.	ಜವಳು ಭೂಮಿಯನ್ನು ಕೃಷಿಯೋಗ್ಯ ಮಾಡುವಿಕೆ	2.00	–
16.	ಭೂ ಅಭಿವೃದ್ಧಿ ತರಬೇತಿ ಕೇಂದ್ರ	–	–
17.	ಭೂ ಅಂತರ್ಜಲ ಸಂಶೋಧನೆ	2.00	–
18.	ಇತರೆ	5.00	3.25
	ಒಟ್ಟು	629.48	266.40

ಶಹಾಪುರ–ಶೋರಾಪುರ ಕ್ಷೇತ್ರಕ್ಕೆ ಸೇರಿದ ರಸ್ತೆಗಳ ದುರಸ್ತಿ

176 (1033): ಶ್ರೀ ಶಿವಶೇಖರಪ್ಪ ಗೌಡ ಶಿರವಾಳ್, (ಶಹಾಪುರ):–

ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಾಪುರ–ಶೋರಾಪುರ ಕ್ಷೇತ್ರಕ್ಕೆ ಸೇರಿದ ಸುರಪುರ ಕೆಂಭಾವಿ ಲೋಕೋಪಯೋಗಿ ರಸ್ತೆ ಹಾಳಾಗಿದ್ದು, ಇದನ್ನು ನೀರಾವರಿ ಇಲಾಖೆಯವರು ವಹಿಸಿಕೊಂಡಿರುವರೆ;

ಆ) ಹಾಗಿದ್ದಲ್ಲಿ, ಇದನ್ನು ಕೃಷ್ಣಾ ಮೇಲ್ದಂಡೆ (ಪ್ರಚ್ಚುಕಟ್ಟು ರಸ್ತೆ) ಯೋಜನೆಯಲ್ಲಿ ಕೈಕೊಳ್ಳಲಾಗುವುದೇ;

ಇ) ದುರಸ್ತಿ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಈ ರಸ್ತೆಯು ಸದ್ಯಕ್ಕೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿದ್ದು ಇದನ್ನು ನೀರಾವರಿ ಇಲಾಖೆಯ ಕೃಷ್ಣ ಮೇಲ್ದಂಡೆ ಯೋಜನೆಗೆ ಹಸ್ತಾಂತರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಈ ದಿಕ್ಕಿನಲ್ಲಿ ಆದಷ್ಟು ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಇ) ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಈ ರಸ್ತೆಯ ಸುಧಾರಣೆಯ ಕಾಮಗಾರಿಯನ್ನು 1994-95ರಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಸರ್ಕಾರದಲ್ಲಿ ಹರಿಜನ – ಗಿರಿಜನರನ್ನು ವಕೀಲರನ್ನಾಗಿ ನೇಮಕ.

178 (754): ಶ್ರೀ ಕರಿಯಣ್ಣ (ಹೊಳೇಹೊನ್ನೂರು):–

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ವಕೀಲರನ್ನು ಕೋರ್ಟುಗಳಲ್ಲಿ ಸರ್ಕಾರಿ ವಕೀಲರನ್ನಾಗಿ ನೇಮಕ ಮಾಡಲಾಗಿದೆ;

ಆ) ಅವರಲ್ಲಿ ಹರಿಜನ–ಗಿರಿಜನರ ಸಂಖ್ಯೆ ಎಷ್ಟು;